**ಸಾಕ್ಷಿಯನ್ನು ದಿಃ 05.07.2024 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**<u>ಪಾಟೀಸವಾಲು ಃ ಆರೋಪಿ ಪರ ಶ್ರೀ ಎಂ.ಇ.ಪಿ. ವಕೀಲರಿಂದಃ-</u>**

ನಾನು ರೈತನಾಗಿದ್ದೇನೆ ಹಾಗೂ ಪತ್ರಕರ್ತನಾಗಿಯೂ ಕೆಲಸ ಮಾಡುತ್ತೇನೆ. ನಾನು ಪ್ರಜಾಸತ್ಯ ಪೇಪರಗೆ ಬರೆಯುತ್ತೇನೆ. ನಾನು ಅದರ ರಿಪೋರ್ಟರ ಆಗಿದ್ದೇನೆ. ನಾನು ಪರ್ತಕರ್ತ ಎಂದು ತೋರಿಸಲು ದಾಖಲೆಯನುನ ಹಾಜರುಪಡಿಸಿಲ್ಲ, ಬೇಕಾದರೆ ಹಾಜರುಪಡಿಸುತ್ತೇನೆ. ನಾನು ಪ್ರಜಾಸತ್ಯ ಪೇಪರನಲ್ಲಿ ಕಳೆದ ಮೂರು ವರ್ಷಗಳಿಂದ ಪರ್ತಕರ್ತನಾಗಿದ್ದೇನೆ. ಈ ಹಿಂದೆ ಸದರಿ ಪೇಪರ ಪ್ರಧಾನ ಸಂಪಾದಕರು ಚಂದ್ರಶೇಖರ ಆಗಿದ್ದರು, ಈಗ ಬದಲಾಗಿದ್ದಾರೆ. ಸದರಿ ಚಂದ್ರಶೇಖರ ಎಲ್ಲಿ ವಾಸ ಮಾಡುತ್ತಾರೆ ಎಂದು ಗೊತ್ತಿಲ್ಲ. ನಮ್ಮ ಪತ್ರಿಕೆಯ ಕಚೇರಿ ಮೈಸೂರಿನ ಡಬಲ್ ರಸ್ತೆಯಲ್ಲಿದೆ. ಅದರ ಸಂಪೂರ್ಣ ವಿಳಾಸ ಹೇಳಲಾಗುವುದಿಲ್ಲ. ಸದರಿ ಕಚೇರಿಯಲ್ಲಿ ತುಂಬಾ ಜನ ಕೆಲಸ ಮಾಡುತ್ತಾರೆ. ಸದರಿ ಕಚೇರಿಯಲ್ಲಿ ಯಾರ್ಯಾರು ಏನೇನು ಕೆಲಸ ಮಾಡುತ್ತಾರೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ. ನಾನು ಪತ್ರಿಕಾ ವರದಿಗಾರನಾಗಿ ಕೆಲಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ.

ನಾನು ವ್ಯವಸಾಯ ಮಾಡುತ್ತೇನೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ, ಬೇಕಾದರೆ ಹಾಜರುಪಡಿಸುತ್ತೇನೆ. ನನ್ನ ಹೆಸರಿನಲ್ಲಿ ಉದ್ದೂರು ಕಾವಲ್ ಗ್ರಾಮದ ಸರ್ವೇ ನಂ. 514 ರಲ್ಲಿ 3 ಎಕರೆ ಜಮೀನು ಇದೆ. ಈಗ ನಾನು ಏಲಕ್ಕಿ ಬಾಳೆ ಬೆಳೆದಿದ್ದೇನೆ. ಆಯಾಯ ವರ್ಷದ ಬೆಳೆಯನ್ನು ಪಹಣಿಯಲ್ಲಿ ನಮೂದಿಸುತ್ತಾರೆ ಎಂದರೆ ಸರಿ. ಪಹಣಿಯನ್ನು ಹಾಜರುಪಡಿಸಿಲ್ಲ, ಬೇಕಾದರೆ ಹಾಜರುಪಡಿಸುತ್ತೇನೆ. ನನಗೆ ಯಾವುದೇ ಜಮೀನು ಇಲ್ಲ ಮತ್ತು ನಾನು ವ್ಯವಸಾಯ ಮಾಡುವುದಿಲ್ಲ ಎಂದರೆ ಸರಿಯಲ್ಲ. ನನಗೆ ಜಮೀನು ಇಲ್ಲದೇ ಇರುವುದರಿಂದ ಬಾಳೇ ಬೆಳೆಯನ್ನು ಬೆಳೆದಿಲ್ಲ ಎಂದರೆ ಸರಿಯಲ್ಲ.

ನಾನು ಹುಣಸೂರು ಶಾಖೆಯ ಎಕ್ಸಿಸ್ ಬ್ಯಾಂಕ, ಕರ್ನಾಟಕ ಬ್ಯಾಂಕ ಮತ್ತು ಎಸ್.ಬಿ.ಐ. ನಲ್ಲಿ ಖಾತೆ ಹೊಂದಿದ್ದೇನೆ. ಸದರಿ ಖಾತೆಗಳಲ್ಲಿ ಈಗ ಎಷ್ಟೆಷ್ಟು ಹಣ ಇದೆ ಎಂದು ಹೇಳಲಾಗುವುದಿಲ್ಲ. 2019 ರಲ್ಲಿ

ಮೇಲೆ ಹೇಳಿದ ಖಾತೆಗಳಲ್ಲಿ ಎಷ್ಟು ಹಣ ಇತ್ತು ಎಂದು ಹೇಳಲಾಗುವುದಿಲ್ಲ. ನನ್ನ ಖಾತೆಗೆ ಸಂಬಂಧಿಸಿದ 2019 ರ ಸ್ಟೇಟಮೆಂಟ್ ಹಾಜರುಪಡಿಸಲು ತೊಂದರೆ ಇಲ್ಲ. ನಾನು ಆದಾಯ ತೆರಿಗೆ ಪಾವತಿದಾರನಲ್ಲ.

ಆರೋಪಿ ನನಗೆ ಕಳೆದ 12 ವರ್ಷಗಳಿಂದ ಹುಣಸೂರಿನಲ್ಲಿಯೇ ಪರಿಚಯ. ಆರೋಪಿ ಮೂಲತಃ ಯಾವ ಊರಿನವರು ಎಂದು ಗೊತ್ತಿಲ್ಲ, ಆದರೆ ಹುಣಸೂರಿನ ಸರಸ್ವತಿಪುರಂನಲ್ಲಿ ಕೆಲಸ ಮಾಡುತ್ತಾರೆ. ಆರೋಪಿ ಯಾವ ವರ್ಷದಿಂದ ಯಾವ ವರ್ಷದವರಗೆ ಸರಸ್ವತಿಪುರಂ ಶಾಲೆಯಲ್ಲಿ ಕೆಲಸ ಮಾಡದ್ದಾರೆ ಎಂದು ಹೇಳಲಾಗುವುದಿಲ್ಲ. ಸರಸ್ವತಿಪುರಂನಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿ ಎಲ್ಲಿ ವಾಸ ಇದ್ದರು ಎಂದು ಗೊತ್ತಿಲ್ಲ. ಆರೋಪಿಯ ತಂದೆಯ ಹೆಸರು ಟಿ.ತಮ್ಮೆಗೌಡ. ಆರೋಪಿ ಈಗ ಎಲ್ಲಿ ವಾಸ ಇದ್ದಾರೆ ಎಂದು ಗೊತ್ತಿಲ್ಲ. 2019 ರಲ್ಲಿ ಆರೋಪಿ ಎಲ್ಲಿ ವಾಸ ಇದ್ದರು ಎಂದು ಗೊತ್ತಿಲ್ಲ. ಯಾವುದೇ ವ್ಯಕ್ತಿಯ ಪೂರ್ವಾಪರ ಗೊತ್ತಿಲ್ಲದೇ ಸಾಲ ಕೊಡುವುದಿಲ್ಲ ಎಂದರೆ ಆರೋಪಿ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಸಾಲ ಕೊಟ್ಟಿದ್ದೇನೆ.

ನಾನು ನಂಜಾಪುರ ವಾಸಿ. ಆರೋಪಿ ಹನಗೋಡು ಹತ್ತಿರ ಹಳ್ಳಿಯಲ್ಲಿ ಕೆಲಸ ಮಾಡುತ್ತಿದ್ದರು. ಈಗ 8 ವರ್ಷದ ಹಿಂದೆ ಆರೋಪಿ ಅಲ್ಲಿ ಕೆಲಸ ಮಾಡುತ್ತಿದ್ದರು. ಹನಗೋಡಿನ ಯಾವ ಶಾಲೆಯಲ್ಲಿ ಅವರು ಕೆಲಸ ಮಾಡುತ್ತಿದ್ದರು ಎಂದು ಗೊತ್ತಿಲ್ಲ. ನಾನು ಮರೆತಿದ್ದೇನೆ. ನಾನು ಹುಣಸೂರು ತಾಲ್ಲೂಕಿನವನು. ನನಗೆ ಹುಣಸೂರು ತಾಲ್ಲೂಕಿನ ಎಲ್ಲ ಗ್ರಾಮಗಳ ಪರಿಚಯ ಇದೆ. ಯಾವುದಾದರೂ ಗ್ರಾಮಕ್ಕೆ ಹೋದರೆ ಇಂತಜಹ ಗ್ರಾಮಕ್ಕೆ ಹೋಗಿದ್ದೆ ಎಂದು ಹೇಳುವ ಸಾಮರ್ಥ್ಯ ನನಗಿದೆ. ಹುಣಸೂರಿನಿಂದ ಹನಗೋಡು ಸುಮಾರು 16 ಕಿ.ಮೀ. ಆಗುತ್ತದೆ. ನಾನು ಆರೋಪಿಯನ್ನು ಭೇಟಿಯಾಗಲು ಹನಗೋಡಿಗೆ ಹೋಗಿಲ್ಲ ಅವರೇ ನನ್ನನ್ನು ಹುಣಸೂರಿನಲ್ಲಿ ಭೇಟಿಯಾಗಿದ್ದಾರೆ. ನಾನು ಕೆಲಸ ಮಾಡುತ್ತಿದ್ದ ಎಲ್ಲ ಕಡೆಯೂ ಆರೋಪಿಯನ್ನು ಭೇಟಿಯಾಗಿದ್ದೇನೆ. ನಾನು ಹುಣಸೂರಿನಲ್ಲಿ ಪತ್ರಿಕೆಯ ಕೆಲಸ ಮಾಡುತ್ತಿದ್ದಾಗ ಆರೋಪಿಯನ್ನು ಭೇಟಿಯಾಗಿದ್ದೇನೆ.

ನನ್ನ ಸ್ವಪ್ರಮಾಣಿತ ಹೇಳಿಕೆಯನ್ನು ಬರೆಯುವಾಗ ರೈತ ಮತ್ತು ಪತ್ರಕರ್ತ ಎಂದು ಹೇಳಿದ್ದೇನೆ. ನಾನು ಬಿ.ಎ. ಓದಿದ್ದೇನೆ. ನನಗೆ ಕನ್ನಡ ಚೆನ್ನಾಗಿ ಓದಲು ಬರೆಯಲು ಬರುತ್ತದೆ. ಇಂಗ್ಲಿಷ ಸ್ವಲ್ಪ ಬರುತ್ತದೆ. ನನ್ನ ಹೆಸರು ವಿಳಾಸವನ್ನು ಇಂಗ್ಲಿಷನಲ್ಲಿ ಓದಬಲ್ಲೆ. ನನ್ನ ಸ್ವಪ್ರಮಾಣಿತ ಹೇಳಿಕೆಯಲ್ಲಿ ನನ್ನ ವೃತ್ತಿಯನ್ನು ವ್ಯಾಪಾರ ಎಂದು ಬರೆಯಲಾಗಿದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ನನ್ನ ವೃತ್ತಿಯನ್ನು ವ್ಯವಸಾಯ ಮತ್ತು ನ್ಯೂಸ ಪೇಪರ ಏಜೆಂಟ್ ಎಂದು ಬರೆಯಲಾಗಿದೆ ಎಂದರೆ ಸರಿ. ನಾನು ಬೇರೆ ಬೇರೆ ಉದ್ಯೋಗಗಳನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪತ್ರಿಕಾ ವರದಿಗಾರನಲ್ಲ, ವ್ಯವಸಾಯ ಗಾರನಲ್ಲ, ನ್ಯೂಸ್ ಪೇಪರ್ ಏಜೆಂಟ್ ನಲ್ಲ ಮತ್ತು ವ್ಯಾಪಾರಸ್ಥನಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ವೃತ್ತಿಯನ್ನು ಮಾಡದೇ ಇದ್ದರೂ ಕೂಡ ಈ ಕೇಸಿಗೊಸ್ಕರ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ. ಹುಣಸೂರು.